ಸುರುಳಿಯಾಕಾರದಲ್ಲಿರುವ ಈ ಮಂಗಳವಾದ್ಯ ಮದುವೆ ಮನೆಗಳಲ್ಲಿ ಓಲಗದವರು, ಮಿಲಿಟರಿಯಲ್ಲಿ ಬ್ಯಾಂಡ್‌ನವರು ಮಾತ್ರ ಬಳಸುತ್ತಿದ್ದರು. ಹೊಳೆಹೊಳೆವ ಈ ವಾದ್ಯದಲ್ಲಿ ರಾಗಗಳ ಹೊಳಪು, ಛಾಪುಗಳನ್ನು ಮೂಡಿಸುತ್ತಾ ಮಂಗಳ ರಾಗಗಳಾದ ಶ್ರೀ, ಮಧ್ಯಮಾವತಿ, ಕೇದಾರಗೌಳ ಮಾತ್ರವಲ್ಲದೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಎಲ್ಲ 72 ಮೇಳಕರ್ತ ರಾಗಗಳನ್ನೂ ನುಡಿಸಿ ವಿಶ್ವವಿಖ್ಯಾತರಾದವರು ಕಲೈಮಾಮಣಿ ಕದ್ರಿ ಗೋಪಾಲನಾಥ್. ಬೆಲ್ಜಿಯಂ ಮೂಲದ ಈ ವಾದ್ಯದಲ್ಲಿ ಸಂಗೀತದ ಜನ್ಯರಾಗಗಳೂ ಪರ್ಜನ್ಯ ಜಪ ಮಾಡುತ್ತಿದ್ದವು. ಅಮೃತವರ್ಷಿಣಿ ಮೇಘ, ಮಲ್ಹಾರ್ ಮುಂತಾದ ಮಳೆರಾಗಗಳು ಅಲೆಅಲೆಯಾಗಿ ಮೊಳಗುತ್ತಿದ್ದವು. ಗಂಭೀರ ಸ್ವರೂಪದ ರಾಗಗಳು ಕಿವಿಗಳಿಗೆ ಮಧುರಾತಿಮಧುರವಾಗಿ ತೇಲಿ ಬರುತ್ತಿದ್ದವು.

ವರ್ಣ, ಜತಿಸ್ವರ, ಕೃತಿ ಕೀರ್ತನೆಗಳ ಸ್ವರಾಲಾಪ, ಚಿಟ್ಟೆಸ್ವರ ಮುಂತಾದವು ಸುಷಿರ ವಾದ್ಯ ಸ್ಯಾಕ್ಸೊಫೋನ್‌ನಲ್ಲಿ ಮೋಡಿ ಮಾಡುತ್ತಿದ್ದವು. ಇಷ್ಟು ಸುಪ್ರಸಿದ್ಧ ವಾದಕರ ಜೊತೆಜೊತೆಯಲ್ಲಿಯೇ ಸುಮಾರು 30 ವರ್ಷಗಳಿಂದ ಒಡನಾಡಿದ ಮೋರ್ಚಿಂಗ್ ವಿದ್ವಾಂಸ ರಾಜಶೇಖರ್ ಭೀಮಾಚಾರ್ ಹಾಗೂ ತಬಲಾದಲ್ಲಿ ಸಹಕರಿಸುತ್ತಿದ್ದ, ಸುಮಾರು 15 ವರ್ಷಗಳಿಂದ ವಿಶ್ವದ ಮೂಲೆಮೂಲೆಗೂ ಜೊತೆಯಾಗಿ ಪಯಣಿಸುತ್ತಿದ್ದ ಪಂ. ರಾಜೇಂದ್ರ ನಾಕೋಡ್ ಕದ್ರಿ ಅವರ 'ದೊಡ್ಡ ಗುಣ'ವನ್ನು ಮೆಲುಕು ಹಾಕಿದ್ದಾರೆ.


ಕದ್ರಿ ಅವರೊಂದಿಗೆ ರಾಜೇಂದ್ರ ನಾಕೋಡ್

## ತನಿಯಾವರ್ತನ ವರ್ಣಸಲಸದಳ!

ಕದ್ರಿ ಗೋಪಾಲನಾಥ್ ಸಂಗೀತದ ಮೇರುಪರ್ವತ. ಆದರೂ ಅವರ ನಡೆನುಡಿ ಚಿಕ್ಕಮಕ್ಕಳಂತೆ ಇರ್ತಿತ್ತು. ವಿಶ್ವದ ಮೂಲೆಮೂಲೆಗೂ ಅವರೊಂದಿಗೆ ಸಂಗೀತ ಕಛೇರಿಗಳಿಗಾಗಿ ಸುತ್ತಾಡಿದ್ದೇನೆ. ಪ್ರಯಾಣ ಮಾಡುವಾಗ ಸಖತ್ ಜೋಕ್ ಮಾಡೋರು. ಬೇರೆ ಊರಿಗೆ ಹೋದಾಗ ಸಹ ಕಲಾವಿದರಿಗೆ ಸರಿಯಾಗಿ ವಸತಿ, ಊಟ ತಿಂಡಿ ವ್ಯವಸ್ಥೆ ಮಾಡಿದ್ದಾರಾ ಎಂಬ ಕಾಳಜಿ ತಗೊಳ್ಳೋರು. ವಿದ್ವಾಂಸರಾದರೂ ಸಾಮಾನ್ಯರ ಹಾಗೇ ಇತ್ತು ಅವರ ನಡವಳಿಕೆ. ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ಹೋದಾಗ ಅಲ್ಲಿ ತುಂಬ ಹಾಡುಗಳನ್ನು ಕೇಳ್ತಿದ್ರು. ಲತಾಮಂಗೇಶ್ಕರ್ ಹಾಡುಗಳು ಅವರಿಗೆ ಬಹಳ ಇಷ್ಟ. ಮರಾಠಿ ಅಭಂಗ್‌ಗಳನ್ನು ತುಂಬ ಖುಷಿಯಿಂದ ಕೇಳ್ತಿದ್ರು.

ಕಛೇರಿ ಕೊಡಲು ಸ್ಟೇಜ್ ಹತ್ತಿದರೆಂದರೆ ಅವರು ಬಹಳ ಶಿಸ್ತಿನ ಮನುಷ್ಯ. ಅವರ 'ಅವತಾರ'ವೇ ಬೇರೆ ಇರ್ತಿತ್ತು. ಘನಗಾಂಭೀರ್ಯದ 'ನಡೆ' ಅವರದು. ಇದೇ 'ನಡೆ' ಸಂಗೀತದ ಸ್ಥಾಯಿಗಳಲ್ಲೂ ಮೇಳೈಸುತ್ತಿತ್ತು. ಅವರ ಹಾಗೇ ಸಹಕಲಾವಿದರೂ ಇರಬೇಕೆಂಬ ಅಲಿಖಿತ ನಿಯಮ ಅಲ್ಲಿತ್ತು. ಅದೇ ಮೂಡ್, ಅದೇ ವೈಬ್ರೇಷನ್ ಅನ್ನು ನಮ್ಮಲ್ಲೂ ನಿರೀಕ್ಷೆ ಮಾಡ್ತಿದ್ರು. ಹಿಂದೂಸ್ತಾನಿ ಸಂಗೀತದ ಅನೇಕ ಮೇರುಕಲಾವಿದರಿಗೆ ತಬಲಾ ಸಾಥಿ ನೀಡಿದ್ದರೂ ಕದ್ರಿ ಅವರಂಥ 'ಸಂಗೀತ ಶಿಸ್ತು' ನಾನು ಬೇರೆ ಯಾವ ಕಲಾವಿದರಲ್ಲೂ ಕಂಡಿಲ್ಲ.

ಸಂಗೀತ ಕಛೇರಿ ಯಾವಾಗಲೂ ಸಕ್ಸಸ್ ಆಗಬೇಕು ಅಂತ ಹುರಿದುಂಬಿಸ್ತಿದ್ರು. ಅಪ್ಪಟ ಕರ್ನಾಟಕ ಶಾಸ್ತ್ರೀಯ ಸಂಗೀತ ನುಡಿಸುವಾಗ ಹಿಂದೂಸ್ತಾನಿ ಶೈಲಿಯ ತಬಲಾ ಅವರ ಸಂಗೀತಕ್ಕೆ ಒಗ್ಗಿಸಿಕೊಳ್ಳೋದು ಮೊದಮೊದಲಿಗೆ ಬಹಳ ಕಷ್ಟ ಆಗ್ತಿತ್ತು. ದಕ್ಷಿಣಾದಿ ಸಂಗೀತದಲ್ಲಿ ತಾಳದ ಲೆಕ್ಕಾಚಾರವೇ ಬೇರೆ. ನುಡಿಸಾಣಿಕೆ ಶೈಲಿಯೂ ವಿಭಿನ್ನ. ಮೃದಂಗ ವಾದಕರು ನುಡಿಸುವ ತಾಳಕ್ಕೆ ತಬಲಾದ ಬೋಲ್‌ಗಳು ಹೊಂದಾಣಿಕೆಯಾಗಬೇಕು. ಇವನ್ನೆಲ್ಲ ನನಗೆ ಬಹಳ ಚೆನ್ನಾಗಿ ಹೇಳಿಕೊಟ್ರು. ಅನೇಕ ಟಿಪ್ಸ್‌ಗಳನ್ನೂ ಕೊಟ್ರು. 'ನಿನಗೆ ಸಾಮರ್ಥ್ಯ ಇದೆ, ನುಡಿಸು, ಹೊಸ ಕ್ರಿಯೇಷನ್ಸ್ ಮಾಡು, ನಿನ್ನದೇ ಆದ ಕಂಪೋಸಿಷನ್ಸ್ ಮಾಡಿ ಮ್ಯಾಚ್ ಮಾಡು' ಅಂತ ಹೇಳ್ತಾ ಇದ್ರು. ಅವರಿಂದ ಬಹಳ ಕಲಿತೆ. ನಾನು ಈ ಮಟ್ಟಕ್ಕೆ ಬೆಳೆಯಲು ಅವರೇ ಕಾರಣ.

ಕಛೇರಿಗಳಲ್ಲಿ 'ತನಿಯಾವರ್ತನ'ದ್ದೇ ಮಹತ್ವದ ಘಟ್ಟ. ಇಲ್ಲಿ ಮೃದಂಗ, ತಬಲಾ, ಮೋರ್ಚಿಂಗ್, ಪಿಟೀಲು ನುಡಿಸುವ ಸಹಕಲಾವಿದರಿಗೆ ತುಂಬ ಅವಕಾಶ ಕೊಡ್ತಾ ಇದ್ರು. ರಾಗ ತಾನಂನಲ್ಲಿ ಪ್ರತೀ ಕಛೇರಿಗೂ ಹೊಸ ಕ್ರಿಯೇಷನ್ಸ್ ಮಾಡ್ತಿದ್ದದ್ದು ಕದ್ರಿ ಅವರ ನುಡಿಸಾಣಿಕೆಯ ವೈವಿಧ್ಯಕ್ಕೆ ಕಾರಣ. ಇಲ್ಲಿ ತಬಲಾ ನುಡಿಸುವಾಗ 'ಪಖಾವಾಜ್' ಶೈಲಿಯನ್ನು ತರ್ತಿದ್ದೆ. ಓಪನ್ ಬಾಜ್‌ನಲ್ಲಿ ನುಡಿಸುವಾಗ ಮತ್ತು ಹಿಂದೂಸ್ತಾನಿ ಶೈಲಿಯ 'ಚೌತಾಲ್'ನಲ್ಲಿ ನುಡಿಸುವಾಗ ಓಹೋ ಇದೇ ಹೊಸ ತರ ಕೇಳ್ತಿತ್ತಲ್ಲ' ಎಂದು ಆನಂದ ಪಡೋರು.

ಒಮ್ಮೆ ಮಂಗಳೂರು ಸಮೀಪದ ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಕಛೇರಿ. ಅದು ಕದ್ರಿ ಅವರೊಂದಿಗೆ ನನ್ನ ಪರಿಚಯವಾದ ಆರಂಭದ ದಿನಗಳು. ಖ್ಯಾತ ಬಾನ್ಸುರಿ ವಾದಕ ಪಂ. ರೋಣು ಮಜುಂದಾರ್ ಹಾಗೂ ಕದ್ರಿ ಅವರ 'ಬಾನ್ಸುರಿ–ಸ್ಯಾಕ್ಸೊಫೋನ್' ಜುಗಲ್‌ಬಂದಿ. ಅಲ್ಲಿ ನಿಗದಿಯಾಗಿದ್ದ ತಬಲಾವಾದಕರು ಬಾರದೇ ಇದ್ದಾಗ ನನಗೆ ಅವಕಾಶ ಸಿಕ್ತು. ಮೊದಲು ಶಾಕ್ ಆಯ್ತು. ಇಷ್ಟು ದೊಡ್ಡ ವಿದ್ವಾಂಸರಿಗೆ ಹೇಗೆ ಸಾಥಿ ಕೊಡೋದು ಅಂತ. ಕಾರ್ಯಕ್ರಮದಲ್ಲಿ ಮೃದಂಗ ನಾದಕ್ಕೂ ತಬಲಾದ ಲಯಕ್ಕೂ ಮ್ಯಾಚ್ ಆಗಲೇ ಇಲ್ಲ. ಎಲ್ಲರೂ ಬೈದರು. ನಂಗೆ ತುಂಬ ಅವಮಾನ ಆಯ್ತು. ಆದರೂ ಕದ್ರಿ ಅವರು ಒಂದು ಮಾತೂ ಹೇಳಲಿಲ್ಲ. ಸಮಾಧಾನ ಮಾಡಿದ್ರು. ಇದು ಅವರ ದೊಡ್ಡಗುಣ.

ವೇದಿಕೆಯಲ್ಲಿ ಕರ್ನಾಟಕ ಸಂಗೀತ ಮಾತ್ರ ನುಡಿಸ್ತಿರಲಿಲ್ಲ. ಹಿಂದೂಸ್ತಾನಿ ಶೈಲಿಯನ್ನೂ ನುಡಿಸಿ ಕೇಳುಗರಲ್ಲಿ ಸಂಚಲನ ಉಂಟುಮಾಡ್ತಿದ್ರು.

### ಜನನ-ಸಂಗೀತ ಪಯಣ

ಕದ್ರಿ ಗೋಪಾಲನಾಥ್ ಹುಟ್ಟಿದ್ದು 1949ರ ಡಿಸೆಂಬರ್ 6ರಂದು. ತಂದೆ ತನಿಯಪ್ಪ ಮತ್ತು ನಾಗಮ್ಮ. ಮಂಗಳೂರು ಸಮೀಪದ ಪಾಣೆಮಂಗಳೂರಿನ ಶಾರದಾ ಪ್ರೌಢ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿವರೆಗೆ ಶಿಕ್ಷಣ ಪಡೆದಿದ್ದರು.

ತಂದೆ ನಾದಸ್ವರ ಕಲಾವಿದರು. ಸಹಜವಾಗಿಯೇ ಇವರಿಗೆ ಸಂಗೀತದಲ್ಲಿ ಆಸಕ್ತಿ ಬೆಳೆಯಿತು. ಮಂಗಳೂರಿನ ಕಲಾನಿಕೇತನದ ಗೋಪಾಲಕೃಷ್ಣ ಅಯ್ಯರ್ ಅವರಿಂದ ಸಂಗೀತದ ಸರಿಗಮಪ ಕಲಿತರು. ಆದಾಗಿ ಚೆನ್ನೈನ ಸಂಗೀತ ವಿದ್ವಾಂಸ ಟಿ.ಎನ್.ಗೋಪಾಲಕೃಷ್ಣ ಅವರಲ್ಲಿ ಸ್ಯಾಕ್ಸೊಫೋನ್ ನುಡಿಸಾಣಿಕೆ ಕಲಿತರು. 1978ರಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ತಮ್ಮ ಮೊದಲ ಸಂಗೀತ ಕಛೇರಿ ನೀಡಿದ್ದರು. ಆ ಬಳಿಕ ದೇಶ ವಿದೇಶಗಳಲ್ಲಿ ಇವರ ಸ್ಯಾಕ್ಸೊಫೋನ್ ನಾದದಲೆ ನಿರಂತರವಾಗಿ ಅನುರಣಿಸುತ್ತಲೇ ಇತ್ತು.